Villages electrified in Gulbarga, Bidar and Raichur Districts

*Q.—151. **Sri J. P. SARWESH** (Seram).—

Will the Minister for Public Works be pleased to state:—

(*a*) the number of villages that have been electrified in Gulbarga, Bidar and Raichur Districts (Talukwise information may be provided);

(*b*) the No. of villages in each Taluk that would be electrified during 1967–68 in the abovementioned districts;

(*c*) the policy and the basis that the villages are taken for eleetrification in each Taluk?

A.—**Sri VEERENDRA PATIL** (Minister for Public Works).—

(*a*) *Vide* statement appended.

(*b*) *Vide* statemetnt appended.

(*c*) Lift Irrigation potential assessed on the basis of Cluster of wells and the proximity of the existing distribution lines are the main criteria for the selection of the villages for electrification.

STATEMENT

MYSORE STATE ELECTRICITY BOARD

Villages already Electrified and proposed to be electrified during the year 1967–68 in Gulbarga, Raichur and Bidar Districts.

Sl. No.	Name of Taluk	No. of villages Electrified to the end of February 1967	No. of villages proposed to be Electrified during 1967-68	Remarks
1	2	3	4	5
(A)	*Gulbarga District.*			
1	Chittapur ...	8	... 3	
2	Gulbarga ...	22	6	
3	Shorapur ...	5	... 3	
4	Yadgiri ...	5	... 3	
5	Alland ...	11	... 5	
6	Chincholi ...	11	... 6	
7	Sedum ...	5	... 3	
8	Shahapur ...	5	... 3	
9	Javargi ...	2	... 3	
10	Afzalpur ...	8	... 5	
		82	40	

1	2		3		4	5
(B)	*Raichur District.*					
1	Lingasugur	...	28	...	3	
2	Koppal	...	32	...	3	
3	Sindhanoor	...	15	...	3	
4	Gangavathi	...	10	...	3	
5	Manvi	...	16	...	3	
6	Raichur	...	11	...	2	
7	Deodurg	...	4	...	3	
8	Kustagi	..	5	..	2	
9	Yalbarga	...	6	...	3	
			127		25	
(C)	*Bidar District.*					
1	Bidar	...	11	...	9	
2	Humnabad	...	17	...	8	
3	Bhalki	...	1	...	5	
4	Aurad	...	3	...	5	
5	Basavakalyani	...	1	...	8	
			33		35	

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಆಗಲೇ ತಿಳಿಸಿದ ಮೂರುಸಾವಿರ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಪ್ರೋಗ್ರಾಮಿನಲ್ಲಿ ಅಸೆಂಬ್ಲಿಯ ಎಲ್ಲಾ ಸದಸ್ಯರ ಕ್ಷೇತ್ರಗಳಿಗೂ ಆ ಸೌಲಭ್ಯ ದೊರೆಯುವಂತೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ನಾವು ಹಾಕಿಕೊಂಡಿರತಕ್ಕ ಈ ಸ್ಕೀಮನ್ನು ಉದಾಸೀನ ಮಾಡತಕ್ಕ ಅವಕಾಶವೇ ಇಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಚಿವರು ಈ 3 ಸಾವಿರ ಹಳ್ಳಿಗಳಿಗೆ ವಿದ್ಯುತ್ ಸರಬರಾಯಿ ಮಾಡತಕ್ಕ ಸ್ಕೀಂ ಒಂದು ಇರುವುದರ ಜೊತೆಗೆ ಯಾರು ಯಾರು ಮುಂದೆ ಬಂದು ಹಣ ಕೊಡುತ್ತಾರೋ ಅಂಥವರಿಗೆ ಮೊದಲು ಈ ಸೌಲಭ್ಯವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹಣವನ್ನ ಕೊಟ್ಟವರಿಗೆ ಮಾತ್ರ ಕೊಡಲಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—3 ಸಾವಿರ ಗ್ರಾಮಗಳ ಪ್ರೋಗ್ರಾಂ ಏನಿದೆ ಅದು ನಾರ್ಮಲ್. ಅದಲ್ಲದೆ ಜನರು ತಾವಾಗೇ ಮುಂದೆ ಬಂದು ಹಣವನ್ನು ಕೊಟ್ಟರೆ ಅವರಿಗೂ ಈ ಸೌಲಭ್ಯವನ್ನು ಕೊಡ ರಾಗುತ್ತದೆ. ಇದರಿಂದ ಡಬ್ಬಲ್ ಬೆನಿಫಿಟ್ ಆಗುತ್ತದೆ ಎಂದು ಹೇಳಿದೆ.

ಶ್ರೀ ಪುಟ್ಟಸ್ವಾಮಿ.—1967ಕ್ಕೆ ವಿದ್ಯುಚ್ಛಕ್ತಿಯ ಕೊರತೆಯುಂಟಾಗುತ್ತದೆ ಎಂದು ಇಲ್ಲಿ ತಿಳಿಸಿದ್ದಾರಲ್ಲಾ, ಇದನ್ನು ಭರ್ತಿಮಾಡಿಕೊಳ್ಳುವುದಕ್ಕೇನು ಪ್ರಯತ್ನ ಮಾಡಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—ಆ ಬಗ್ಗೆ ಆಗಲೇ ಸಾಕಷ್ಟು ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ ಬನಪ್ಪ.—ಕೆಲವು ತಾಲ್ಲೂಕುಗಳಲ್ಲಿ ಹೆಚ್ಚು ಹಳ್ಳಿಗಳನ್ನು ಸೇರಿಸಿ ಕೆಲವು ತಾಲ್ಲೂಕುಗಳಲ್ಲಿ ಕಡಮೆ ಹಳ್ಳಿಗಳನ್ನು ಸೇರಿಸಿರುವುದಕ್ಕೆ ಕಾರಣವೇನು? ಇದೇನು ರಾಜಕೀಯ ವ್ಯತ್ಯಾಸವೋ? ಕೆಲವು ತಾಲ್ಲೂಕುಗಳಿಗೆ ನಾಲ್ಕು ಹಳ್ಳಿಗಳಿಗೂ ಇನ್ನು ಕೆಲವು ತಾಲ್ಲೂಕುಗಳಿಗೆ 25 ಹಳ್ಳಿಗಳಿಗೂ ವಿದ್ಯುತ್ತೀಕರಣಗೊಳಿಸಿದ್ದೀರಿ. ಇದರಲ್ಲಿ ಏನಾದರೂ ರಾಜಕೀಯ ತಾರತಮ್ಯ ವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ರಾಜಕೀಯ ತಾರತಮ್ಯ ಪ್ರಶ್ನೆ ಏನೂ ಬರುವುದಿಲ್ಲ. ವಿದ್ಯುಚ್ಛಕ್ತಿ ಮಂಡಲಿಯವರು ಈ ವಿಚಾರದಲ್ಲಿ ಒಂದು ಕಾರ್ಯಕ್ರಮವನ್ನು ಹಾಕುತ್ತಾರೆ. ಯಾವ ಹಳ್ಳಿಗಳಿಗೆ ಲೈನ್ ಮೆಟೀರಿಯಲ್ಸ್ ಕಡಿಮೆ ವೆಚ್ಚದಲ್ಲಿ ಉಪಯೋಗಿಸಿ ವಿದ್ಯುತ್ತೀಕರಣ ಮಾಡುವುದಕ್ಕೆ ಅನುಕೂಲವಾಗುತ್ತದೋ ಅಂತಹ ಹಳ್ಳಿಗಳಿಗೆ ಆದ್ಯತೆ ಕೊಡುತ್ತಾರೆ. ಯಾವ್ಯಾವ ಹಳ್ಳಿಗಳಿಗೆ ಕೇವಲ 3-4-5 ಮೈಲುಗಳ ದೂರದಲ್ಲಿ ವಿದ್ಯುತ್ತೀಕರಣಗೊಳಿಸುವುದಕ್ಕೆ ಅನುಕೂಲಗಳಿವೆಯೋ ಅಂತಹವುಗಳಿಗೆ ಪ್ರಿಫರೆನ್ಸ್ ಕೊಡುತ್ತಾರೆ.

Opening of Right Bank Canal of K. R. S.

*Q.—141.—**Sri G. MADE GOWDA** (Kirugavalu).—

Will the Minister for Public Works be pleased to state :—

(*a*) whether it is a fact that the Krishnaraja Sagar Project Right Bank Canal has been opened and extended for irrigating lands in Varuna Hobli, Mysore District ;

(*b*) if so, the estimated cost and the area now irrigable ;

(*c*) whether it would not adversely affect the already developed atchkat under Krishnaraja Sagar ?

A.—**Sri VEERENDRA PATIL** (Minister for Public Works).—

(*a*) It is proposed to open a Right Bank High Level Canal from Krishnaraja Sagar.

(*b*) (i) Rs. 136 lakhs.

(ii) It is proposed to irrigate 24,000 acres.

(*c*) No.

ಶ್ರೀ ಜಿ. ಮಾದೇಗೌಡ.—ಈ ಕೃಷ್ಣರಾಜಸಾಗರದ ನಿರ್ಮಾಣ ಮಾಡಿದಾಗ ಅದರ ಕೆಳಗೆ ಎಷ್ಟು ಅಚ್ಚುಕಟ್ಟು ತರಬೇಕೆಂದು ಮೊದಲು ಸರ್ವೆ ಮಾಡಿತ್ತು ? ಹಾಗೆ ಈಗ ಮಾಡಿದ್ದರೆ ಎಷ್ಟು ಅಚ್ಚುಕಟ್ಟು ಆಗಿದೆಯೆಂದು ಮೊದಲು ಅಂದಾಜು ಮಾಡಿತ್ತು ? ಇತ್ತೀಚೆಗೆ ಎಷ್ಟು ಎಕರೆ ಕೃಷ್ಣರಾಜ ಸಾಗರದ ಕೆಳಗೆ ಅಚ್ಚುಕಟ್ಟು ಬಂದಿದೆ ?

1-30 P.M.

ಶ್ರೀ ವೀರೇಂದ್ರಪಾಟೀಲ್.—ಅದಕ್ಕೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಕೃಷ್ಣರಾಜಸಾಗರದ ನಿರ್ಮಾಣವಾಗುವಾಗ ಮೊದಲು ಒರಿಜಿನೇಟ್ ಆದುದು ಒಂದು ಲಕ್ಷ 20ಸಾವಿರ ಎಕರೆಗಳಿಗೆ ನೀರು ಕೊಡಬೇಕೆಂದು. ಇತ್ತೀಚೆಗೆ 2 ಲಕ್ಷದವರೆಗೆ ಅಚ್ಚುಕಟ್ಟು ಆಗುತ್ತದೆಂದು ತಿಳಿದಿದೆ. ನುದ್ದೂರು ಮತ್ತು ಮಳವಳ್ಳಿಯ ಕೊನೆಯ ಭಾಗಗಳಿಗೆ ಇದರಿಂದ ನೀರಿಗೆ ತೊಂದರೆ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರಪಾಟೀಲ್.—ಕಾವೇರಿನ ಪ್ರಕಾರ ಒಂದು ಲಕ್ಷ 20 ಸಾವಿರ ಎಕರೆ ಅಚ್ಚುಕಟ್ಟು ಡೆವಲಪ್‌ಮೆಂಟ್ ಆಗಬೇಕೆಂಬ ಯೋಜನೆ ಇದೆ. ಆದರೆ 2 ಲಕ್ಷ ಎಕರೆ ಅಚ್ಚುಕಟ್ಟಾಗುತ್ತದೆಂದು ಹೇಳಿದ್ದನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಜಿ. ಮಾದೇಗೌಡ.—ಸರ್ಕಾರ ಯಾವತ್ತೂ ಪರಿಶೀಲನೆಮಾಡದೆ, ಕೆ. ಆರ್. ಎಸ್. ಬಲದಂಡೆ ನಾಲೆಯನ್ನು ತೋಡುವುದರಿಂದ ಕೆ. ಆರ್. ಎಸ್. ಕೆಳಗಡೆಗೆ ತೊಂದರೆಯಾಗುವುದಿಲ್ಲ ವೆಂದು ಹೇಗೆ ಉತ್ತರ ಕೊಟ್ಟರು ?